ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1328
2	ಸದಸ್ಯರ ಹೆಸರು	ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)
3	ಉತ್ತರಿಸುವ ದಿನಾಂಕ	21-12-2018
4	ಉತ್ತರಿಸುವ ಸಚಿವರು	ಸಹಕಾರ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್ ಯಾವ ಕಾಯ್ದೆಯಡಿ ನೋಂದಣಿಯಾಗಿದೆ; ಈ ಕಾಯ್ದೆಯಡಿ ಅಸೋಸಿಯೇಷನ್‌ಗೆ ನಿವೇಶನ ರಚಿಸಿ ಹಂಚಿಕೆ ಮಾಡಲು ಅಧಿಕಾರವಿದೆಯೇ;	ಈ ಅಸೋಸಿಯೇಷನ್ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರನ್ವಯ ನೋಂದಣಿ ನೋಂದಣಿಯಾಗಿರುತ್ತದೆ. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರಡಿ ನಿವೇಶನ ರಚಿಸಿ ಹಂಚಿಕೆ ಮಾಡಲು ಅವಕಾಶ ಇರುವುದಿಲ್ಲ. ಆದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೇಲ್‌ಫೇರ್ ಅಸೋಸಿಯೇಷನ್ ಈ ಸಂಘದ ಮೆಮೋರಾಂಡಮ್ ಆಫ್ ಅಸೋಸಿಯೇಷನ್‌ನ clause (ಐ) ಪ್ರಕಾರ "Assist and help members in acquiring residential premises sites from any Government authority and private agency for their welfare of association members" ಎಂದು ಅವಕಾಶ ಮಾಡಿಕೊಂಡಿರುತ್ತಾರೆ. ಮೆಮೋರಾಂಡಮ್ ಆಫ್ ಅಸೋಸಿಯೇಷನ್‌ನ ಉದ್ಧೃತ ಭಾಗವನ್ನು (ಅನುಬಂಧ-1) ರಲ್ಲಿ ಒದಗಿಸಿದೆ.

ಆ	ಕರ್ನಾಟಕ ಸುವರ್ಣ ರಾಜ್ಯೋತ್ಸವದಡಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿ.ಡಿ.ಎ) ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್ ನವರು ನಿವೇಶನ ಹಂಚಿಕೆಯಲ್ಲಿ ನಡೆಸಿರುವ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ: ಅಸೋಸಿಯೇಷನ್ ಅವ್ಯವಹಾರಗಳ ಬಗ್ಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಇಂಗಳಗಿ ರವರಿಂದ ತನಿಖೆ ನಡೆದಿಯೇ: ಹಾಗಿದ್ದಲ್ಲಿ, ತನಿಖಾ ವರದಿ ನೀಡುವುದು:	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿ.ಡಿ.ಎ) ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್ ಈ ಸಂಘದ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರಗಳಾಗಿವೆ ಎಂಬುದಾಗಿ ಸಂಘದ ಕೆಲವು ಸದಸ್ಯರುಗಳು ದೂರುಗಳನ್ನು ಸಲ್ಲಿಸಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿರುತ್ತದೆ. ಅಸೋಸಿಯೇಷನ್‌ನ ಅವ್ಯವಹಾರಗಳ ಬಗ್ಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಇಂಗಳಗಿ ರವರಿಂದ ತನಿಖೆ ನಡೆದಿದೆ. ವಿಚಾರಣಾಧಿಕಾರಿಗಳ ತನಿಖಾ ವರದಿ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.
ಇ.	ಅಸೋಸಿಯೇಷನ್ ಆಡಳಿತಾಧಿಕಾರಿ ನೇಮಿಸಬೇಕೆಂದು ತೀರ್ಮಾನವಾಗಿರುವುದು ನಿಜವೇ: ಇದ್ದಲ್ಲಿ ಯಾವ ದಿನಾಂಕದಂದು ತೀರ್ಮಾನವಾಗಿದೆ: ಇಲ್ಲಿಯವರೆಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು: ಯಾವಾಗ ಕ್ರಮ ಕೈಗೊಳ್ಳಲಾಗುವುದು:	ಅಸೋಸಿಯೇಷನ್ ವಿರುದ್ಧದ ಆರೋಪಗಳ ಕುರಿತು ವಿಚಾರಣೆ ನಡೆಸಿ ವಿಚಾರಣಾಧಿಕಾರಿಗಳು ಸಲ್ಲಿಸಿರುವ ತನಿಖಾ ವರದಿಯು ಸರ್ಕಾರದ ಪರಿಶೀಲನೆಯಲ್ಲಿದ್ದು ಅಸೋಸಿಯೇಷನ್‌ಗೆ ಆಡಳಿತಾಧಿಕಾರಿ ನೇಮಿಸ ಬೇಕೆಂದು ತೀರ್ಮಾಣವಾಗಿರುವುದಿಲ್ಲ.
ಈ	ಅಸೋಸಿಯೇಷನ್ ಅವ್ಯವಹಾರಗಳ ಬಗ್ಗೆ ಸರ್ಕಾರವು ಕೈಗೊಳ್ಳುವ ಶೀಘ್ರ ಕ್ರಮಗಳನ್ನು ಸವಿವರವಾಗಿ ತಿಳಿಸುವುದು?	ವಿಚಾರಣಾಧಿಕಾರಿಯಾದ ಶ್ರೀ ಇಂಗಳಗಿ ರವರು ದೂರ ಅರ್ಜಿದಾರರ ಮನವಿ ಮತ್ತು ದಾಖಲಾತಿಗಳನ್ನು ಮಾತ್ರ ಪರಿಶೀಲಿಸಿ ಸಂಘದಿಂದ ಯಾವುದೇ ಮಾಹಿತಿಯನ್ನು ಅಥವಾ ವಿಚಾರಣೆಯನ್ನು ನಡೆಸದೇ ಏಕ ಪಕ್ಷೀಯವಾಗಿ ವರದಿ ನೀಡಿರುತ್ತಾರೆಂದು ಆರೋಪವಿದ್ದು, ಈ ಬಗ್ಗೆ ಪರಿಶೀಲಿಸಲಾಗುತ್ತಿದ್ದು ನಿಯಮಾನುಸಾರ ಕ್ರಮವಿಡಲಾಗುವುದು.

ಸಂಖ್ಯೆ : ಸಇ 157 ಸಸಂನೋ 2018

(ಬಂಡೆಪ್ಪ ಖಾಶೆಂಪುರ)
ಸಹಕಾರ ಸಚಿವರು

ಅನುಬಂಧ - 1

ಬಿ.ಡಿ.ಎ. ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ.)

(ರಿ.ನಂ. 653/2001-02)

ಬಿ.ಡಿ.ಎ. ಪ್ರಧಾನ ಕಛೇರಿ ಆವರಣ, ಕುಮಾರಪಾರ್ಕ್ ರಸ್ತೆ, ಬೆಂಗಳೂರು-560 020.

ಅಧ್ಯಕ್ಷರು :
ಬಿ.ಎನ್. ಚಿಟ್ಟೇಗೌಡ

ಉಪಾಧ್ಯಕ್ಷರು :
ಎಂ. ಮಲ್ಲಣ್ಣ ಎಂ.ಎ.,ಎಲ್‌ಎಲ್.ಬಿ.

ಪ್ರಧಾನ ಕಾರ್ಯದರ್ಶಿ :
ಹೆಚ್. ನಾಗರಾಜ್

ಜಂಟಿ ಕಾರ್ಯದರ್ಶಿಗಳು :
ಎನ್. ತಿಪ್ಪೇಸ್ವಾಮಿ
ಬಿ.ಜಿ. ಚಂದ್ರೇಗೌಡ

ಖಜಾಂಚಿ :
ಕೆ.ಎಂ. ರವಿಶಂಕರ್

ಕಾರ್ಯಕಾರಿ ಸಮಿತಿ ಸದಸ್ಯರು :
ಅಶೋಕ್ ಕುಮಾರ್
ಎ. ಮಂಜುನಾಥ್
ಹೆಚ್.ಸಿ. ಮುರಳೀಧರ್
ಕೆ. ಮಹದೇವೇಗೌಡ
ಆರ್.ವಿ. ಕಾಂತರಾಜು
ಎನ್.ಎಸ್. ಕಾಮಣ್ಣ
ಕೆ. ಚಿಕ್ಕರಾಯಿ
ಆರ್. ವೆಂಕಟೇಶ್
ತನ್ನಯ್ಯ
ಚಿ. ಗಂಗಾಧರಯ್ಯ
ಆರ್. ವಾಸುದೇವರಾಜು
ಅನಿಲ್ ಕುಮಾರ್
ಎಸ್. ನಿಂಗರಾಜೇಗೌಡ

ಕ್ರ.ಸಂ. : ....

ದಿನಾಂಕ :

Statement showing the amendment of Memorandum of Association as resolved in the Special General Body Meeting.

EXISTING	PROPOSED	AMENDED
MEMORANDUM OF ASSOCIATION **AIMS AND OBJECTIVES** - New Clauses -	**MEMORANDUM OF ASSOCIATION AIMS AND OBJECTIVES** **J)** Frequently Health Checkup programs by medical experts for the Benefit of Members of the BDA Employees Welfare Association. **K)** Association will publish the good books **L)** Assist and help members in acquiring residential premises sites from any government authority. and private agency for their welfare of association Members. **M)** To assist and help the members for getting any Civic amienties, civil rights in respect of their residential properties from any Government Authorities, corporation Board are any statutory bodies	**MEMORANDUM OF ASSOCIATION AIMS AND OBJECTIVES** **J)** Frequently Health Checkup programs by medical experts for the Benefit of Members of the BDA Employees Welfare Association. **K)** Association will publish the good books **L)** Assist and help members in acquiring residential premises sites from any government authority and private agency for their welfare of association Members. **M)** To assist and help the members for getting any Civic amienties, civil rights in respect of their residential properties from any Government Authorities, corporation Board are any statutory bodies

ಅಧ್ಯಕ್ಷರು
ಬಿ.ಡಿ.ಎ. ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ.)
ಬೆಂಗಳೂರು.

ಪ್ರಧಾನ ಕಾರ್ಯದರ್ಶಿ
ಬಿ.ಡಿ.ಎ. ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ.)
ಬೆಂಗಳೂರು.

ಪ್ರಧಾನ ಕಾರ್ಯದರ್ಶಿ
ಬಿ.ಡಿ.ಎ. ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ.)
ಬೆಂಗಳೂರು.